ಶಿಕಾರಿಪುರ ತಾಲ್ಲೂಕಿನಲ್ಲಿ ಬರಗಾಲ ಕಾಮಗಾರಿ ಅವ್ಯವಹಾರದ ಬಗ್ಗೆ

೧೧೦೨. ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಕಂದಾಯ ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೬-೮೭ನೇ ಸಾಲಿನಲ್ಲಿ ಶಿಕಾರಿಪುರ ತಾಲ್ಲೂಕಿನಲ್ಲಿ ಬರಗಾಲ ಕಾಮಗಾರಿಯಲ್ಲಿ ಅವ್ಯವಹಾರ ನಡೆದಿದೆ ಎಂದು ಸಿ.ಒ.ಡಿ. ತನಿಖೆ ಆಗಿದ್ದು ಅದರ ವರದಿ ಸರ್ಕಾರದವರ ಕೈಸೇರಿದೆಯೇ ?

ಆ) ಈ ವರದಿ ಸರ್ಕಾರದವರ ಕೈಸೇರಿದ ದಿನಾಂಕವಾವುದು ಮತ್ತು ಈವರೆಗೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕೈಗೊಂಡಿರುವ ಕ್ರಮವೇನು ?

ಇ) ಈ ವರದಿಯ ಪ್ರತಿಯನ್ನು ಸದನದ ಮುಂದಿಡಲಾಗುವುದೇ

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಮಂತ್ರಿಯವರು).—

ಅ) ಸಿ.ಓ.ಡಿ.ಯ ತನಿಖೆ ಮುಕ್ತಾಯದ ಹಂತದಲ್ಲಿದೆ. ಅದರ ವರದಿ ಇನ್ನೂ ಸರ್ಕಾರದ ಕೈ ಸೇರಿಲ್ಲ.

ಆ) ಪ್ರಶ್ನೆಯು ಉತ್ತರದಿಂದಾಗಿ ಈ ಪ್ರಶ್ನೆಗಳು ಉದ್ಭವಿಸುವುದಿಲ್ಲ.

ಬೆಂಕಿ ಅನಾಹುತಕ್ಕೆ ಮನೆ ಕಳೆದುಕೊಂಡವರಿಗೆ ಪರಿಹಾರ ನೀಡುವ ಕುರಿತು

೯೯೭. ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಕಂದಾಯ ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ ಬೆಂಕಿ ಅಪಘಾತದಲ್ಲಿ ಮನೆ ಕಳೆದುಕೊಂಡವರಿಗೆ ನೀಡುತ್ತಿರುವ ಪರಿಹಾರ ಧನದ ಮೊತ್ತ ಅತೀ ಕಡಿಮೆಯಾಗಿರುವುದರಿಂದ ಸದರಿ ಮೊತ್ತವನ್ನು ಹೆಚ್ಚಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಎಸ್.ಆರ್. ಬೊಮ್ಮಾಯಿ(ಕಂದಾಯ ಯೋಜನಾ ಹಾಗೂ ಕಾರ್ಮಿಕ ಮಂತ್ರಿಯವರು).—

(ಅ) ಅಗ್ನಿ ಅನಾಹುತದಲ್ಲಿ ನೊಂದ ಸಂತ್ರಸ್ಥರಿಗೆ ಹಾಲಿ ಇರುವ ಪರಿಹಾರ ಧನವನ್ನು ಹೆಚ್ಚಿಸುವಕ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಬಳ್ಳಾರಿ ನಗರದಲ್ಲಿ ಶಾದಿ ಮಹಲ್ ಕಟ್ಟಡ ಕಟ್ಟಲು ಜಮೀನು ಮಂಜೂರಾತಿ ಬಗೆಗೆ

೧೬೦೮ ಶ್ರೀ ಎಂ. ರಾಮಪ್ಪ (ಬಳ್ಳಾರಿ).—ಮಾನ್ಯ ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಳ್ಳಾರಿ ನಗರದಲ್ಲಿ ಶಾದಿಮಹಲ್ ಕಟ್ಟಲು ಜಮೀನು ಮಂಜೂರಾತಿ ಕೋರಿ ಬಳ್ಳಾರಿ ಮಜಸ್ಲಿಂ ಜನಾಂಗದವರಿಂದ ಮನವಿಯೊನಾದರೂ ಬಂದಿದೆಯೇ,

ಆ) ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು).—

ಅ) ಹೌದು.

ಆ) ಬಳ್ಳಾರಿ ನಗರದ ಟಿ.ಎಸ್. ನಂ. ೯೪-೧ (ಬಿ), ವಾರ್ಡ್ ನಂಬರ್ ೨೧, ಬ್ಲಾಕ್ ನಂಬರ್ ೪ರಲ್ಲಿ ೧೨೧೦೦ ಚದರ ಅಡಿ ನಿವೇಶನವನ್ನು ಬಳ್ಳಾರಿ ಶಾದಿ ಮಹಲ್‌ಗೆ ಮಂಜೂರು ಮಾಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.